ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ವಿವಾದ

೯೦೩. ಶ್ರೀ ಆರ್.ಎಸ್. ಮಾನೆ (ಬೆಳಗಾಂ).—ಮಾನ್ಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವಲು ಸಮಿತಿಯನ್ನು ಯಾವಾಗ ರಚಿಸಲಾಯಿತು ಮತ್ತು ಅದರ ಕರ್ತವ್ಯಗಳೇನು?

ಆ) ಸರ್ಕಾರ ಈ ಸಮಿತಿಗೆ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಇ) ಈ ಸಮಿತಿಯ ಅಧ್ಯಕ್ಷರಿಗೆ ಗೌರವಧನ ಅಥವಾ ಸಂಬಳವನ್ನು ಕೊಡಲಾಗುತ್ತಿದೆಯೇ?

ಈ) ಈ ಸಮಿತಿಯ ಕಾಲ ಮಿತಿ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧) ದಿನಾಂಕ ೧೮-೪-೮೪ ರಂದು ''ಗಡಿ ಸಲಹಾ ಸಮಿತಿ''ಯನ್ನು ರಚಿಸಲಾಗಿತ್ತು. ಸದರಿ ಸಮಿತಿಯನ್ನು ''ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ''ಯೆಂದು ದಿನಾಂಕ ೨೬-೮-೮೫ ರಂದು ಪುನರ್ ರಚಿಸಲಾಯಿತು.

೨) ಈ ಸಮಿತಿಯ ಕಾರ್ಯವ್ಯಾಪ್ತಿ ಈ ಕೆಳಗೆ ತೋರಿಸಿದಂತಿರುವುದು.—

ಅ) ಮಹಾಜನ ಆಯೋಗದ ವರದಿಯ ಚೌಕಟ್ಟಿನಲ್ಲಿ ಗಡಿ ವಿವಾದವನ್ನು ಬಗೆಹರಿಸಲು ಸರ್ಕಾರಕ್ಕೆ ಸಲಹೆಗಳನ್ನು ನೀಡುವುದು.

ಆ) ಸರಕಾರದ ರಾಜಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪ್ರಯತ್ನಿಸಿರುವುದೇ?

ಇ) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು,ಕಂಡುಬಂದಿರುವುವೇ, ಹಾಗಿದ್ದರೆ ಅವುಗಳು ಯಾವುವು?

ಈ) ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು?

ಉ) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು?

ಊ) ಸರಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಿಕರವಾಗಿ ಕಾರ್ಯರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ?

ಆ) ರೂ. ೧,೦೩,೩೪೩-೨೫ ಪೈ.

ಇ) –ಇಲ್ಲ–

ಈ) ನಿಗಧಿ ಮಾಡಿಲ್ಲ.

SRI R. S. MANE.—Whether this Committee has given written advice to the Government regarding the solution of the border dispute within the frame work of the Mahajan Commission Report?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಯಾವುದೇ ತರಹದ ಒಂದು ರಿಪೋರ್ಟ್ ಅವರು ಕೊಟ್ಟಿಲ್ಲ. ನಾನು ಈ ವಿಷಯದಲ್ಲಿ ಸ್ಪಷ್ಟವಾಗಿ ಹೇಳುವುದಾದರೆ ಮೊದಲು ಇದಕ್ಕೆ ಎರಡು ಕಮಿಟಿ ಇತ್ತು. ನಾವು ಅದನ್ನು ಒಂದು ಕಮಿಟಿಯಾಗಿ ಮಾಡಿದ್ದೇವೆ. (೧) ಗಡಿ ಸಲಹಾ ಸಮಿತಿ ಅಂತ ಇತ್ತು ಎರಡನೆಯದಾಗಿ ನಮ್ಮ ಕನ್ನಡ ಭಾಷೆಯನ್ನು ಯಾವ ರೀತಿಯಾಗಿ ಆಡಳಿತ ಭಾಷೆಯನ್ನಾಗಿ ಜಾರಿಗೆ ತರಬೇಕು ಎಂಬುದನ್ನು ತಿಳಿಯತಕ್ಕಂಥಾದ್ದು. ಇದರ ಉದ್ದೇಶ ಮಹಾಜನ್ ಕಮಿಟಿಯನ್ನು ಯಾವರೀತಿಯಾಗಿ ಜಾರಿಗೆ ತರಬೇಕು ಎಂದು ಹೇಳುವುದರ ಬಗ್ಗೆ ನಿರ್ದಿಷ್ಟವಾದ ಯಾವುದೇ ಒಂದು ರಿಪೋರ್ಟನ್ನು ಅವರು ಕೊಟ್ಟಿಲ್ಲ. ಆದರೆ ಕನ್ನಡ ಭಾಷೆಯನ್ನು ಜಾರಿಗೆ ತರುವುದರಲ್ಲಿ ಯಾವ ದೋಷ ಇದೆ, ಯಾವ ತೊಂದರೆ ಇದೆ, ಯಾವುದು ತಪ್ಪು ಇದೆ, ಯಾವುದರಲ್ಲಿ ವಿಳಂಬ ಇದೆ ಇದರ ಬಗ್ಗೆ ಅನೇಕ ಪತ್ರಗಳನ್ನು ಈ ಸಮಿತಿಯ ಅಧ್ಯಕ್ಷರು ಬರೆದಿದ್ದಾರೆ. ಅದರ ಮೇಲೆ

ನಾವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮತ್ತು ಗಡಿ ವಿಚಾರದಲ್ಲೂ ಕೂಡ ಅಲ್ಲಿ ಇರತಕ್ಕಂಥಾ ಜನರ ಸಮಸ್ಯೆಯನ್ನೂ ಕೂಡ,ಅದರ ಬಗ್ಗೆ ಕೆಲವು ಪತ್ರಗಳನ್ನು ಈ ಸಮಿತಿಯ ಅಧ್ಯಕ್ಷರು ನಮಗೆ ಬರೆದಿದ್ದಾರೆ. ಅದರ ಮೇಲೂ ಕೂಡ ನಾವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

SRI R. S. MANE.—The Hon. Chief Minister has said, the Committee has been appointed to see the developmental works and the inconvenience caused to the people in the border area. If the Government is very enthusiastic in implementing Kannada, I think this committee and its chairman are over-enthusiastic. The Committee Chairman, when he came to Belgaum, convened a meeting of the officers and asked them to implement Kannada at all levels, otherwise they would be dismissed from the service. The effect is, I am sorry to say. if the applications for grant of widows pension, old-age pension and handicaps pension are written in any other language-say Marathi or Urdu,-generally in our area they are written in Marathi,-they are straight-away rejected. Do you mean to say that widows who speak Marathi should not get Government assistance or those who want to get government assistance they should submit applications only in Kannada? What is the remedy if they are not in Kannada?

ಶ್ರೀ ರಾವ ಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಅದು ವಿಡೋ ಪೆನ್‌ಷನ್ ಆಗಲಿ, ಅಥವಾ ವೃದ್ಧಾಪ್ಯವೇತನವಾಗಲಿ ಅಥವಾ ಹೆರಿಗೆಭತ್ಯವಾಗಲಿ-ಇಂಥಾದ್ದಕ್ಕೆ ಒಂದು ಫಾರಂ ಇರುತ್ತದೆ, ಗವರ್ನಮೆಂಟ್ ಪ್ರಿಂಟಿಂಗ್ ಪ್ರೆಸ್‌ನಿಂದ ನಾವು ಪ್ರಿಂಟ್ ಮಾಡಿರುತ್ತೇವೆ. ಅದರಲ್ಲಿ ಹೆಸರು ತುಂಬಿ ಸಹಿ ಹಾಕುವುದಕ್ಕೆ ಬಂದರೆ ಹಾಕಲಿ ಇಲ್ಲವೇಹೋದರೆ ಹೆಬ್ಬೆಟ್ಟು ಒತ್ತಿ ಕೊಡಬಹುದು. ಆದುದರಿಂದ ಮಾನ್ಯ ಸದಸ್ಯರು ಹೇಳಿದಂಥ ಸಮಸ್ಯೆ ಉದ್ಭವವಾಗುವುದಿಲ್ಲ. ಯಾರಾದರೂ ಒಬ್ಬ ಮಹಿಳೆ ಅಥವಾ ಸಂಬಂಧಪಟ್ಟಂಥ ವ್ಯಕ್ತಿ ಅವರ ಮಾತೃಭಾಷೆ ಮರಾಠಿಯಾಗಿದ್ದರೆ ಅವರಿಗೆ ಕನ್ನಡ ಗೊತ್ತೇ ಆಗುವುದಿಲ್ಲ ಎಂದು ಇದ್ದರೆ ಅವರ ಭಾಷೆಯಲ್ಲಿ ಬರೆದರೆ ಅಪರಾಧ ಅಲ್ಲ, ನಾವು ಅದನ್ನೂ ಕೂಡ ಸ್ವೀಕಾರ ಮಾಡುತ್ತೇವೆ. ಅವರ ಮಾತೃಭಾಷೆ ಬೇರೆಯಾದ ತಕ್ಷಣ ಅವರು ಇದಕ್ಕೆ ಅನರ್ಹರು ಎಂದು ನಾವು ತಿಳಿಯುವುದಿಲ್ಲ.

SRI R. S. MANE.—The sign-boards in Government offices are only in Kannada. There should be side by side boards in Marthi also. It will be must convenients to the public. On this, I want some assurance from the Hon. Chief Minister.

SRI RAMAKRISHNA HEGDE.—I would be very grateful to my dear friend Mane, if he writes a letter to the Chief Minister of Maharashtra to do the same in that State also.

SRI R. S. MANE.—This isnot the reply to my question. The Chief Minister should either say "yes" or "no." If you want to say no, say it now.